# ಬಹುರೂಪಿ ದೈವಗಳು

ವಚನಕಾರರು 12ನೆಯ ಶತಮಾನದಲ್ಲಿ ಧಾರ್ಮಿಕ–ಆರ್ಥಿಕ–ಸಾಮಾಜಿಕ ಕ್ರಾಂತಿಯ ನೇತಾರರಾದರು. ಸರಳ ನಡಾವಳಿ, ಸರಳವಾದ ಮಾನವತಾವಾದ, ಸರಳತೆಯೇ ಮೂಲವಾದ ಕಾಯಕ ದಾಸೋಹಗಳ ಕಲ್ಪನೆ– ಶರಣರ ಕ್ರಾಂತಿಯನ್ನು ಚರಿತ್ರೆಯಲ್ಲಿ ಎತ್ತರಕ್ಕೆ ಒಯ್ದು ನಿಲ್ಲಿಸಿದೆ. ಕುಲದ ಬಗ್ಗೆ, ಹೆಣ್ಣನ್ನು ಶತಮಾನಗಳಿಂದ ಬಂಧಿಸಿಟ್ಟ ಮುಟ್ಟು ಸೂತಕಗಳೆಂಬ ಕಲ್ಪನೆಯ ಬಗ್ಗೆ, ದೀನ ದಲಿತರ ಬಗ್ಗೆ ಅವರು ಆಡಿದ ಮಾತುಗಳು ಕಟ್ಟ ಹೊರಟ ಸಮಾಜ ಎಲ್ಲ ಕಾಲಕ್ಕೂ ಅನುಕರಣೀಯವೇ. ಶಾಸ್ತ್ರ, ಪುರಾಣಗಳ ಅನುಸರಣೆಗಿಂತ ಜನಸಾಮಾನ್ಯರೂ ಸಹ ಎಲ್ಲರ ಹಾಗೆ ಸಮಾನತೆಯಿಂದ ಬದುಕಬಲ್ಲ ಧೈರ್ಯವನ್ನು ಶರಣ ಚಳವಳಿ ಕೊಟ್ಟಿತು. ಈ ರೀತಿಯ ಶರಣರ ಕೊಡುಗೆ ಆ ಕಾಲದ ಬಿಕ್ಕಟ್ಟಿನ ಜೀವನಕ್ಕೆ ಉಸಿರು ತುಂಬುವಂತಾದ್ದಾಗಿತ್ತು.

ಒಂದು ಕಡೆ ಜೈನರು, ಇನ್ನೊಂದು ಕಡೆ ವೈದಿಕರು ಇವರಿಬ್ಬರ ನಡುವೆ ಸಿಲುಕಿದ ಸಾಮಾನ್ಯ ಜನರ ಜೀವನ ಅಧೋಗತಿಗಿಳಿದಿತ್ತು. ಈ ಎಲ್ಲಾ ಧರ್ಮಗಳು ಸಾಮಾನ್ಯನೊಬ್ಬನ ಜೀವನವನ್ನು ಪೋಷಿಸುವಂತಿರಲಿಲ್ಲ. ವಚನಕಾರರು ಮೇಲ್ವರ್ಗದ ಬ್ರಹ್ಮ, ವಿಷ್ಣು ಮುಂತಾದ ದೈವಗಳ ಜೊತೆ ಕೆಳ ವರ್ಗದವರನ್ನು ಅಂಧಕಾರದಲ್ಲಿಟ್ಟ ಮಾರಿ, ಮಸಣಿಯರನ್ನು ಕುರಿತು ಮಾತನಾಡಿದರು. ಬಸವಣ್ಣ 'ನಾರಾಯಣನೆಂಬವನ ಕಾಣೆ, ಗೀರಾಯಣನೆಂಬವನ ಕಾಣೆ, ಬೊಮ್ಮನೆಂಬವನ ಕಾಣೆ, ಗಿಮ್ಮನೆಂಬವನ ಕಾಣೆ' ಎಂದು ಮೇಲುವರ್ಗದ ದೈವವನ್ನು 'ಸಾವು ಬಂದು ಕೊಲ್ಲುವಾಗ' ರಕ್ಷಿಸದೆ ಹೋಗುವ ರೀತಿಯನ್ನು ಹೇಳುತ್ತಾನೆ. ಗ್ರಾಮೀಣರು, ಕೆಳವರ್ಗದವರ 'ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲನಾರಿ ದೈವ, ಕೊಳಗ ದೈವ, ಗಿಣ್ಣಲು ದೈವ' ಎಂದು ಪಟ್ಟಿ ಮಾಡುತ್ತಾ ಎಲ್ಲಿ ನೋಡಿದರೂ ದೈವವೇ ತುಂಬಿರುವುದನ್ನು ಗುರುತಿಸುತ್ತಾನೆ. ಹೀಗೆ ದೈವ, ದೈವವೆಂಬುದು ಕಾಲಿಡಲು ಸ್ಥಳವಿಲ್ಲದೆ ನಮ್ಮ ಸುತ್ತಲೂ ತುಂಬಿದೆ ಎಂದು ವ್ಯಂಗ್ಯವಾಡುತ್ತಾನೆ. 12ನೇ ಶತಮಾನದಲ್ಲಿ ದೈವದ ಬಗ್ಗೆ, ದೈವದ ನಾನಾ ಕುಲಗಳ ಬಗ್ಗೆ ಎದ್ದ ಚರ್ಚೆಗಳು ಉಳಿದ ಕಾಲಘಟ್ಟದಲ್ಲಿ ನಡೆಯಲಿಲ್ಲ. ದೈವದ ಹೆಸರಿನಲ್ಲಿ ಜೀವಿಸುವವರು ಹಾಗೂ ದೈವದ ಹೆಸರಿಲ್ಲದೆ ಜೀವಿಸುವವರಿಗೂ ಅಗಾಧ ವ್ಯತ್ಯಾಸವಿದೆ.

ದೈವದ ಹೆಸರಲ್ಲಿ ಅವಲಂಬಿತರಾಗಿರುವವರಿಗೆ ಉದರ ಪೋಷಣೆಗೂ, ಇಹ ಪರಗಳ ಸುಖ ಸಂತೋಷಕ್ಕೂ ದೈವವೇ ಮೂಲವಾಗಿರುತ್ತದೆ. ಕಾರ್ಯ ಜೀವಿಗಳಾದ ಉಳುವವನಿಗೆ, ನೇಕಾರನಿಗೆ, ಗಾಣಿಗನಿಗೆ, ಕಲೆಯನ್ನೇ ನಂಬಿದ ಬಹುರೂಪಿಗಳಿಗೆ ದೈವ ಜೀವನದ ಕಡೆಯ ಭಾಗವಾಗಿರುತ್ತದೆ. ಕಾರ್ಯ ಮೊದಲು ಆ ನಂತರ ದೈವ ಎಂಬ ವಿಚಾರ ಅವರಲ್ಲಿ ನಿಚ್ಚಳವಾಗಿರುತ್ತದೆ. ಐಷಾರಾಮಿ ಜೀವನ ಶೈಲಿ ಒಪ್ಪಿಕೊಂಡವನಿಗೆ, ಇತರರ ದುಡಿಮೆಯಲ್ಲಿ ಲಾಭ ಪಡೆಯುವವನಿಗೆ ದೈವ ತನ್ನ ಪಾಪ ಕರ್ಮವನ್ನು ಮರೆಸುವ ಒಂದು ಸಾಧನವಷ್ಟೇ ಆಗಿರುತ್ತದೆ. ದೇವಲೋಕ, ಮರ್ತ್ಯಲೋಕವೆಂಬ ವ್ಯತ್ಯಾಸಗಳು ಸಹ ಅವರಿಗೆ ಗೋಚರಿಸವು. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ ಎಂದು ನಂಬಿ ನಡೆವರು ಅವರು.

ದೇವಾಲಯದಲ್ಲಿಯೇ ದೇವನಿದ್ದಾನೆ ಎಂದು ನಂಬಿ ಬಾಳುವವಗೆ ದೇವರ ಕಾಟ ಮನುಜರಿಗೆ ತಪ್ಪಿದ್ದಲ್ಲ. ಭಕ್ತ ತಾನು ಪ್ರಾಮಾಣಿಕನಾಗಿದ್ದಾಗ, ತನ್ನ ನಡೆ–ನುಡಿ ಶುದ್ಧವಾಗಿದ್ದಾಗ ತಾನಿರುವ ಸ್ಥಳಕ್ಕೇ ದೇವರನ್ನು ಕರೆಸಬಲ್ಲನಾಗಿದ್ದ. ಹಲವರು ಕಾರ್ಯ ಜೀವಿಗಳು ಕಾರ್ಯ ಮೊದಲು ಆ ನಂತರ ದೈವವೆಂದು ನಂಬಿ ಬದುಕಿದವರು. ತಾನು ಜೀವಿಸುವ ಪರಿಧಿಯೊಳಗೇ ದೈವವಿದೆ ಎಂದು ನಂಬಿದವರು. ತಮ್ಮ ಎದುರು ಬಂದು ದೈವ ಪ್ರತ್ಯಕ್ಷವಾಗಿ 'ನಡೆ ಕೈಲಾಸಕ್ಕೆ' ಎಂದಾಗ 'ಕಾಯಕದ ಕೂಲಿ ಕೊಟ್ಟು ಹೋಗು' ಎಂದು ಕೈಲಾಸವನ್ನು ಧಿಕ್ಕರಿಸಿದವರು. ವಚನಕಾರರಂತೆಯೇ ಸಮಾಜದ ಲೋಪದೋಷದ ಬಗ್ಗೆ ಮಾತನಾಡಿದ ಪುರಂದರದಾಸ, ಕನಕದಾಸರಂತವರು ತಮ್ಮ ಅನುಭಾವ ಲೋಕದಲ್ಲಿ ದೈವವನ್ನು ತಮ್ಮೆದುರೇ ಕಂಡು ಕೊಳ್ಳಬಲ್ಲವರಾಗಿದ್ದರು. ಕನಕದಾಸ ಮತ್ತು ಕೃಷ್ಣನ ಸಂಬಂಧ ಸಖತನದಿಂದ ಕೂಡಿತ್ತು. ತನ್ನ ಪ್ರೀತಿಯ ಭಕ್ತನಾದ ಕನಕನಿಗೆ ಅವನಿರುವೆಡೆಗೆ ದರ್ಶನವನ್ನು ಕೊಡಬಲ್ಲ ದೈವವಾಗಿದ್ದ ಶ್ರೀಕೃಷ್ಣ. ಲೋಕದ ಎಲ್ಲೆಡೆಯೂ ದೈವ ತುಂಬಿರುವಾಗ ಕನಕನಿಗೆ 'ಬಯಲು ಆಲಯದೊಳಗೋ, ಆಲಯದೊಳಗೆ ಬಯಲೋ' ಎಂದು ಅನಿಸಿದ್ದು ಸಹಜವಾಗಿಯೇ ಇದೆ. ಈ ನಿಟ್ಟಿನಲ್ಲಿ ಬಸವಣ್ಣನ ದೇಹವೇ ದೇಗುಲವೆಂಬ ಕಲ್ಪನೆ ಉದಾತ್ತವಾದದ್ದು. ಉಳ್ಳವರು ಶಿವಾಲಯ ಮಾಡಿದರೆ ಬಡವರಿಗೆ ಅದು ಸಾಧ್ಯವಿಲ್ಲ. ಆದರೆ ಬಡವನ ದೈವದ ಕಲ್ಪನೆ ಸೀದಾ ಸಾದಾವಾಗಿದ್ದು 'ಎನ್ನ ಕಾಲೇ ಕಂಬ, ದೇಹವೇ ದೇಗುಲ'ವೆಂಬ ಕಲ್ಪನೆ ಎಲ್ಲರಿಗೂ ಎಟುಕುವಂತಾದ್ದಾಗಿದೆ.

ಇಂದು ನಮ್ಮ ನಂಬಿಕೆ, ಆಚಾರ ವಿಚಾರ ಎತ್ತ ಕಡೆ ಸಾಗುತ್ತಿದೆ. ದೇವರು ಭಕ್ತರ ನಡುವೆ 'ಮಠ, ದೇವಾಲಯಗಳನ್ನು' ಆರ್ಥಿಕ, ಧಾರ್ಮಿಕ ಚಟುವಟಿಕೆಗಳಾಗಿ ಮುನ್ನಡೆಸಲು ಪುರೋಹಿತರು, ಮಠದ ಗುರುಗಳು ಮಧ್ಯವರ್ತಿಗಳಾಗಿದ್ದಾರೆ. ದೈವವನ್ನು ಕಾಣಿಸಲು ಇವರೇ ಮಾರ್ಗದರ್ಶಕರಾಗುತ್ತಾರೆ. ಇವರನ್ನು ಹಾದು ಹೋಗದೆ ಆಸಕ್ತರಿಗೆ ದೈವ ಕಾಣಲು ಸಾಧ್ಯವೇ ಇಲ್ಲ. ಕುವೆಂಪುರವರ 'ಜಲಗಾರ' ತನ್ನ ಕಾಯಕದಲ್ಲಿಯೇ ದೈವವನ್ನು ಕಾಣಬಲ್ಲ ಶ್ರಮಜೀವಿ. ಇಂತಹ ಆತ್ಮವಿಶ್ವಾಸವನ್ನು ಗಟ್ಟಿಗೊಳಿಸುವ ನಂಬಿಕೆಗಳು ಮಾತ್ರ ಜನಸಮುದಾಯವನ್ನು ಸರಿಯಾದ ದಿಕ್ಕಿನಲ್ಲಿ ನಡೆಸಬಲ್ಲವು.

ಕೇರಳದಲ್ಲಿ ಇಂದು ಏನು ನಡೆಯುತ್ತಿದೆ. ಸುಪ್ರೀಂ ಕೋರ್ಟ್ ತೀರ್ಪನ್ನು ಕೊಟ್ಟರೂ ಸಹ ಮಹಿಳೆಯರಿಗೇ ತಮ್ಮ 'ಮುಟ್ಟು ಮೈಲಿಗೆ'ಗಳಿಂದ ಹೊರ ಬರಲಾಗುತ್ತಿಲ್ಲ. ಮನಸ್ಸಿನ ಮೌಢ್ಯಕ್ಕೆ ಶಸ್ತ್ರಚಿಕಿತ್ಸೆಯಾಗದೆ, ಮೌಢ್ಯವನ್ನು ಬಿತ್ತುತ್ತಿರುವವರಿಗೆ ಕಠಿಣ ಶಿಕ್ಷೆಯಾಗದೆ ಯಾವ ತೀರ್ಮಾನವೂ ಏನನ್ನೂ ಮಾಡುವುದಿಲ್ಲ. ಮಹಾರಾಷ್ಟ್ರದ 'ಶನಿ ಸಿಗ್ನಾಪುರದ' ದೇವಸ್ಥಾನದ ಪ್ರವೇಶದಲ್ಲಿ ಭೂಮಾತಾ ಬ್ರಿಗೇಡ್‌ನ ತೃಪ್ತಿ ದೇಸಾಯಿ ಮಾಡಿದ ಹೋರಾಟ ಮೆಚ್ಚುವಂತದ್ದು. ಕೇವಲ 4 ತಿಂಗಳ ಹೋರಾಟದಲ್ಲಿ ನ್ಯಾಯ ಪಡೆದಿದ್ದು ಮಹಿಳೆಯರು ದೇವಸ್ಥಾನ ಪ್ರವೇಶ ಮಾಡಿದ್ದಾರೆ. ದೇವಸ್ಥಾನದ ಪ್ರವೇಶದ ಅಗತ್ಯತೆಯ ಬಗ್ಗೆಯೇ ಸಾಕಷ್ಟು ಚರ್ಚೆ ನಡೆದಿವೆ. ದೇವಸ್ಥಾನದ ಪ್ರವೇಶದಿಂದ ಮಹಿಳೆಯರಿಗೆ ಆತ್ಮವಿಶ್ವಾಸ ಮೂಡುತ್ತದೆ ಎಂಬುದು ಪ್ರಚಲಿತ ವಾದ. ಸುಮ್ಮನೆ ಪ್ರಶ್ನಿಸುವುದಾದರೆ ಗಣೇಶ ಹಾಗೂ ಶಬರಿಮಲೆ ಅಯ್ಯಪ್ಪ ಇಬ್ಬರೂ ಬ್ರಹ್ಮಚಾರಿಗಳೇ. ಗಣೇಶ ತನ್ನ ಆಲಯದೊಳಕ್ಕೆ ದಲಿತರು, ಮಹಿಳೆಯರನ್ನು ಬಿಟ್ಟುಕೊಳ್ಳುವುದಾದರೆ, ಅಯ್ಯಪ್ಪಸ್ವಾಮಿ ಏಕೆ ಮುನಿಯುತ್ತಾನೆ. ಬ್ರಹ್ಮಚರ್ಯಕ್ಕೆ ಜೀವ ವಿರೋಧಿಯಾದ ಎರಡು ತಲೆಗಳಿವೆಯೇ. ದೈವ ತಾನೇ ಸೃಷ್ಟಿಸಿದನೆನ್ನಲಾದ ಜೀವಚರಗಳಲ್ಲಿ ಹೆಣ್ಣು–ಗಂಡು, ಮೇಲ್ಜಾತಿ–ಕೆಳಜಾತಿ, ಬಡವ–ಶ್ರೀಮಂತ ಎಂಬ ಭೇದವೆಣಿಸುವುದಾದರೆ ಸೃಷ್ಟಿಯ ಮೂಲದಲ್ಲಿಯೇ ಅಪಸ್ವರವಿದೆ ಎಂದೇ ನಂಬಬೇಕಾಗುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

❖ ಜನಸಮುದಾಯದೊಡನೆ ಹಂಚಿಕೊಳ್ಳಲಾಗದ ಎಲ್ಲ ವಸ್ತುಗಳೂ ನನಗೆ ತ್ಯಾಜ್ಯ.

—ಮಹಾತ್ಮ ಗಾಂಧೀಜಿ

❖ ಆದರ್ಶಗಳು ನಾವು ದಿನಾ ಪಠಣ ಮಾಡಬೇಕಾದ ಗೊಡ್ಡು ಮಂತ್ರಗಳಲ್ಲ; ಅವು ನಮ್ಮ ಜೀವನದ ಉಸಿರು.

—ಕುವೆಂಪು

❖ ಚಿಂತನೆ ಇಲ್ಲದೆ ಕಲಿಯುವುದು ವ್ಯರ್ಥ. ಕಲಿಯದೇ ಚಿಂತನೆ ಮಾಡುವುದು ಅಪಾಯಕರ.

—ಕನ್‌ಫ್ಯೂಷಿಯಸ್

❖ ಪ್ರಜಾಪ್ರಭುತ್ವವಾದಿ ಆದವನು ತೃಣಮಾತ್ರವೂ ಸ್ವಾರ್ಥಿಯಾಗಿರಬಾರದು.

—ಕಾಮರಾಜ್

❖ ದುರ್ಬುದ್ಧಿಯಿಂದ ಕೂಡಿದ ಮನುಷ್ಯನ ಸಂಶಯಗಳನ್ನು ನಿವಾರಿಸುವುದು ಅಶಕ್ಯ.

—ಚಾಣಕ್ಯ ಶತಕ

❖ ಯಾವಾಗ ಮೌನದಿಂದಿರಬೇಕು ಎಂದು ತಿಳಿಯದವನಿಗೆ ಯಾವಾಗ ಮಾತನಾಡಬೇಕು ಎಂಬುದೂ ತಿಳಿಯುವುದಿಲ್ಲ.

—ಪಿ.ಸೈರಸ್